# ಪೊಲೀಸ್ ಕಮಿಷನರೇಟ್ ಘಟಕಕ್ಕೆ 2ನೇ ಸ್ಥಾನ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಪೊಲೀಸ್ ಐ.ಟಿ ಸಾಫ್ಟ್‌ವೇರನ್ನು ಎಲ್ಲ ಪೊಲೀಸ್ ಠಾಣೆಯಿಂದ ಕೇಂದ್ರ ಕಚೇರಿವರೆಗೆ ಆನ್‌ಲೈನ್‌ಗೆ ಅಳವಡಿಸಿದ್ದು, ಈ ಕಾರ್ಯದಲ್ಲಿ ಹುಬ್ಬಳ್ಳಿ ಧಾರವಾಡ ಪೊಲೀಸ ಕಮಿಷನರೇಟ್ ಘಟಕವು ರಾಜ್ಯಕ್ಕೇ 2ನೇ ಸ್ಥಾನ ಪಡೆದಿದೆ.

ಪೊಲೀಸ್ ಐ.ಟಿ ತಂತ್ರಾಂಶದಲ್ಲಿ ಪೊಲೀಸ್ ಠಾಣೆಗಳಲ್ಲಿ ದಿನಂಪ್ರತಿ ನಡೆಯುವ ಚಟುವಟಿಕೆಗಳಾದ ಅಪರಾಧ ಮಾಹಿತಿ, ಠಾಣೆಯ ದಿನಚರಿ, ವಾಹನಗಳ ಲಾಗ್ ಬುಕ್ಸ್, ಪಾಸ್‌ಪೋರ್ಟ್, ಪಾಸ್‌ಪೋರ್ಟ್ ವೆರಿಫಿಕೇಶನ್, ಪಿಟಿಷನ್, ವಿಸಿಟರ್ಸ್ ಬುಕ್ ಮುಂತಾದವುಗಳನ್ನು ಗಣಕೀಕರಣ ಮಾಡುವಲ್ಲಿ ಅವಳಿನಗರ ಪೊಲೀಸ್ ಕಮಿಷನರೇಟ್ ಘಟಕ ಉತ್ತಮ ಸಾಧನೆ ತೋರಿದೆ. ಈ ಕಾರ್ಯ ಮೆಚ್ಚಿ ಪೊಲೀಸ್ ಆಯುಕ್ತರು ಪೊಲೀಸ್ ಐ.ಟಿ.ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗೆ ಸೂಕ್ತ ಬಹುಮಾನ ಘೋಷಿಸಿದ್ದಾರೆ.